

# ಶಕ್ತಿಸ್ವರೂಪಿಣಿ, ನನ್ನ ಸಹಧರ್ಮಿಣಿ

ನಾನಾಗ ತಂದೆಯವರ ಅನಾರೋಗ್ಯದ ದೆಸೆಯಿಂದ ನಮ್ಮ ಪುಟ್ಟ ಹೋಟೆಲನ್ನು ಬಾಡಿಗೆಗೆ ಕೊಟ್ಟಿದ್ದೆ. ಬರುವ ಅಲ್ಪ ಬಾಡಿಗೆ ಹಣ ತಲೆಗಿದ್ದರೆ ಕಾಲಿಗಿಲ್ಲ, ಕಾಲಿಗಿದ್ದರೆ ತಲೆಗಿಲ್ಲ ಎಂಬಂತಿತ್ತು. ತಂದೆ, ತಾಯಿ, ಇಬ್ಬರು ಪುಟ್ಟ ಮಕ್ಕಳ ಸಂಸಾರ. ಬೇರೆ ವ್ಯವಹಾರ ಮಾಡಲು ಬರಿಗೈ! ಗೆಳೆಯರು ಕಾಫಿಗೆ ಕರೆದರೆ ಹೋಗಲಾರೆ! ಕಾರಣ, ಬಿಲ್ ಕೊಡುವ ಸರದಿ ನನ್ನದಾದರೆ ಜೇಬಿನಲ್ಲಿ ಕಾಂಚಾಣವಿಲ್ಲ. ಅಯ್ಯೋ, ನನ್ನ ಪಡಪೋಸಿ ಜೀವನವೇ! ಎಂದು ಅಸಹಾಯಕತೆಯಿಂದ ರಾತ್ರಿ ಕಣ್ಣೀರಿನಿಂದ ದಿಂಬನ್ನು ಒದ್ದೆಯಾಗಿಸುತ್ತಿದ್ದೆ.

ಆ ಕ್ಲಿಷ್ಟಕರ ಸಂದರ್ಭದಲ್ಲಿ ನನಗೆ ಧೈರ್ಯ ತುಂಬಿ ತನ್ನ ಚೇತೋಹಾರಿ ನಡೆನುಡಿಗಳಿಂದ ನನ್ನ ಅಂತಃಶಕ್ತಿಯನ್ನು ಉದ್ದೀಪನಗೊಳಿಸಿದವಳು ನನ್ನ ಪತ್ನಿ. ನಾಲ್ಕು ವರ್ಷಗಳ ಅವಧಿಯಲ್ಲಿ ಹಣ, ಧೈರ್ಯ, ಉತ್ಸಾಹ ಎಲ್ಲವನ್ನೂ ಪುನರುಜ್ಜೀವನಗೊಳಿಸಿಕೊಂಡು ಕೊಟ್ಟ ಪುಟ್ಟ ಹೋಟೆಲನ್ನು ಕರವಶ ಮಾಡಿಕೊಂಡು ಆರಂಭಿಸಿಯೇಬಿಟ್ಟೆ!

ಮೊದಮೊದಲು ಕಿರಾಣಿ ತರಲು ಹಣವಿಲ್ಲ. ಆಗಲೂ ಅರ್ಧಾಂಗಿಯ ಭರವಸೆಯ ಸಾಂತ್ವನ. ಯಶಸ್ಸಿಗೆ ಪಣ ತೊಡುವ ಜೀವದ್ರವ್ಯ ಒದಗಿಸಿದಳು. ನಂತರದ್ದು ಏನೆಂದು ಬಣ್ಣಿಸಲಿ? ಪತ್ನಿಯ ಬೆಂಬಲ, ದೈವಾನುಗ್ರಹ, ಗ್ರಾಹಕರ ಮೆಚ್ಚುಗೆ, ನಮ್ಮ ಪರಿಶ್ರಮ ಎಲ್ಲವೂ ಮೇಳೈಸಿ ಆರು ವರ್ಷದಲ್ಲಿ ಹೊಸ ಕಟ್ಟಡದಲ್ಲಿ ಭರ್ಜರಿಯಾಗಿ ಆರಂಭವಾದ ಹೋಟೆಲ್ ಇಂದಿಗೂ ನಳನಳಿಸುತ್ತ ಜನಾನುರಾಗಿಯಾಗಿ ಸೇವೆ ಸಲ್ಲಿಸುತ್ತಿದೆ.

ಬೇರೆಲ್ಲ ಕಾರಣಗಳ ನಡುವೆ ಸಮಚಿತ್ತ ಭಾವಸಾಂಗತ್ಯದಿಂದ ನನ್ನ ಋಣಾತ್ಮಕ ಚಿಂತನೆಗಳನ್ನು ಧನಾತ್ಮಕವಾಗಿಸಿ, ಕೈಹಿಡಿದು ನಡೆಸಿ ನನ್ನ ಯಶಸ್ಸಿಗೊಂದು ಭಾಷ್ಯ ಬರೆದ ನನ್ನ ಸಹಧರ್ಮಿಣಿಯೇ ನನ್ನ ಶಕ್ತಿರೂಪಿಣಿ.

—ಕೆ. ಶ್ರೀನಿವಾಸರಾವ್,
ಹರಪನಹಳ್ಳಿ

# ಸಿದ್ಧಿಧಾತ್ರಿ ನನ್ನ ಹಿರಿಯಕ್ಕ!

ನಮ್ಮ ಮನೆಯೇ ಬಡತನವನ್ನು ಹಾಸಿ ಹೊದ್ದಿತ್ತು. ಅಪ್ಪ ಎಲೆ ಅಡಿಕೆ, ತಂಬಾಕು, ಬೀಡಿಕಟ್ಟು ಇತ್ಯಾದಿಗಳನ್ನು ಮಂಕರಿಯಲ್ಲಿಟ್ಟುಕೊಂಡು ಬಿರುಬಿಸಿಲಲ್ಲಿ ಬರಿಗಾಲಲ್ಲಿ ತಲೆಯ ಮೇಲೆ ಹೊತ್ತು ಊರೂರು ಸುತ್ತಿ ಅವುಗಳನ್ನು ಮಾರಿ ಬಂದ ಕಾಸಿನಲ್ಲೇ ನಮ್ಮ ಹೊಟ್ಟೆ ಬಟ್ಟೆ.


ನಾನು ಚಿಕ್ಕವನಿದ್ದಾಗಲೇ ನನ್ನ ಹಿರಿಯಕ್ಕ ಗಂಡನ ಮನೆ ಸೇರಿದ್ದಳು. ನಾಲ್ಕು ಅಕ್ಕಂದಿರ ಲಗ್ನ ಮಾಡಿಸಿ, ಇಬ್ಬರು ಅಣ್ಣಂದಿರಿಗೂ ಬದುಕು ಕಟ್ಟಿಸಿ ನಿಭಾಯಿಸಿದ್ದವಳು ಅಪ್ಪನ ಸ್ಥಾನದಲ್ಲಿ. ಅಕ್ಕನ ಜವಾಬ್ದಾರಿಗೆ ಭಾವನೂ ಸಾಥ್ ನೀಡಿದ್ದು ನಮ್ಮ ಭಾಗ್ಯ.

ಉಳಿದವನು ನಾನು. ನಮ್ಮ ಅಕ್ಕನಿಗೆ ನನ್ನನ್ನಾದರೂ ಓದಿಸುವ ಹಂಬಲದಿಂದ ಪ್ರೌಢಶಾಲೆಗೆ ಸೇರಿಸಿದಳು. ಇದು ಅಕ್ಕನ ಮನೆಯಲ್ಲಿ ಬಾವನನ್ನು ಬಿಟ್ಟು ಉಳಿದವರಿಗೆ ಸಹಿಸಲಾಗಲಿಲ್ಲ. 'ಬಿಟ್ಟಿ ಕೂಳು ತಿಂದ್ಕೊಂಡು ಇರೋದ್ಕಿಂತ ಸಾಯೋದೇ ಲೇಸು...' ಅಂತ ಪದೇ ಪದೇ ನನ್ನನ್ನು ಹಂಗಿಸುತ್ತಿದ್ದ ಅವರ ಮಾತುಗಳನ್ನು ಅರ್ಥಮಾಡಿಕೊಳ್ಳುವಷ್ಟು ಬುದ್ಧಿ ಬಂದಿದ್ದ ನಾನು ಮನೆ ಬಿಟ್ಟು ವಾಪಾಸು ಊರಿಗೆ ಹೋಗಿದ್ದೆ.

ಅಕ್ಕ ತವರಿಗೆ ಬಂದು ನಮ್ಮ ಬಡತನದ ಅಸಹಾಯಕ ವಸ್ತುಸ್ಥಿತಿಯನ್ನು ಹೇಳಿ 'ಬೈಯುವವರು, ಹಂಗಿಸುವವರು ಏನೇ ಅನ್ನಲಿ ಕಿವಿಗೊಡಬೇಡ. ಅವುಗಳನ್ನು ಕೇಳಿಯೂ ಕೇಳಿಸದಂತೆ ಸುಮ್ಮನಿದ್ದು ಓದಿನ ಕಡೆ ಮಾತ್ರ ಗಮನಹರಿಸು. ಏನೇ ಬರಲಿ ನಿನ್ನಕ್ಕ ನಾನಿದ್ದೀನಿ ಧೈರ್ಯಗೆಡಬೇಡ...' ಹೀಗೆ ಬುದ್ಧಿ, ಛಲ, ಎಲ್ಲವನ್ನೂ ಹೇಳಿ ಮನೋಸ್ಥೈರ್ಯವನ್ನೂ ತುಂಬಿಸಿ ಮತ್ತೆ ಶಾಲೆಗೆ ಕಳುಹಿಸಿದಳು. ನನ್ನೆದೆಯಲ್ಲಿ ಅಕ್ಷರ ವೃಕ್ಷ ಬೆಳೆಸಿದಳು.

ಅಕ್ಕ ತೋರಿದ ಹಾದಿಯಲ್ಲೇ ನಡೆದು, ಪದವೀಧರನಾಗಿ ಸರ್ಕಾರಿ ನೌಕರನಾದೆ. ನನ್ನ ಬದುಕಿಗೆ ಚೈತನ್ಯ ನೀಡಿ ಸರ್ವಶಕ್ತಿಯನ್ನೂ ತುಂಬಿದ, ತವರು ಮನೆಯನ್ನು ಉದ್ಧಾರ ಮಾಡಿದ ನನ್ನಕ್ಕ ನಮಗೆ ಶಕ್ತಿದೇವತೆಯೇ! ನಮ್ಮ ಮನೆಯ ಅಧಿದೇವತೆಯೂ, ನಿತ್ಯ ಪೂಜೆಗೊಳ್ಳುತ್ತಿರುವ ಸಿದ್ಧಿಧಾತ್ರಿಯೂ ನನ್ನ ಹಿರಿಯಕ್ಕ!

—ಜಿ.ಹೆಚ್. ಸಂಕಪ್ಪ,
ಮೈಸೂರು



# ನನ್ನ ಅಮ್ಮನೇ ನನ್ನ ಜೀವನ ಶಕ್ತಿ

ನಾನು ಚನ್ನಗಿರಿ ತಾಲ್ಲೂಕಿನ ಹಿರೇಗಂಗೂರಿನಲ್ಲಿ ಹುಟ್ಟಿ ಶಾಲಾ ವಿದ್ಯಾಭ್ಯಾಸ ಅಲ್ಲೇ ಮಾಡಿದ್ದು. ಹಳ್ಳಿಯಲ್ಲಿನ ಸರ್ಕಾರಿ ಶಾಲೆಗಳಾದ್ದರಿಂದ ಪಾಠಗಳೂ ಹೇಳಿಕೊಳ್ಳುವ ಮಟ್ಟಕ್ಕಿಲ್ಲದಿದ್ದರೂ ತೀರಾ ಕಳಪೆಯಾಗಿರಲಿಲ್ಲ. ಶಾಲೆಯಲ್ಲಿ ಏನು ಹೇಳಿಕೊಟ್ಟರು? ಏನು ಬರೆಯಲು ಕೊಟ್ಟಿದ್ದಾರೆ? ಎಂದು ನಮ್ಮಮ್ಮ ಕೇಳುತ್ತಿದ್ದರು. ಬೆಳಿಗ್ಗೆ ನಾಲ್ಕೂವರೆಗೆ ಏಳುವುದನ್ನು ರೂಢಿ ಮಾಡಿಸಿದರು. ನಾನು ಎರಡನೇ ತರಗತಿಯಲ್ಲಿದ್ದಾಗಲೇ ನನಗೆ ಮತ್ತು ನನ್ನ ಅಣ್ಣಂದಿರಿಬ್ಬರಿಗೆ ಸುಪ್ರಭಾತಗಳನ್ನು ಬಾಯಿಪಾಠ ಮಾಡಿಸಿದ್ದರು.

ಅಮ್ಮ ಚೆನ್ನಾಗಿ ಹಾಡುತ್ತಿದ್ದರು, ಅದೂ ಹಾರ್ಮೋನಿಯಂ ನುಡಿಸುತ್ತಾ. ಅವರಿಂದ ಹಾಡುವುದನ್ನೂ ಕಲಿಯುತ್ತಿದ್ದೆವು. ಬಾವಿಯಿಂದ ನೀರು ಸೇದಿಕೊಂಡು ತರುತ್ತಿದ್ದೆವು. ಬೇಸಿಗೆಯಲ್ಲಿ ಬಾವಿಯ ನೀರು ತಳ ಕಂಡು ಹಂಡೆ ತುಂಬ ನೀರು ಸಿಗುತ್ತಿರಲಿಲ್ಲ. ಕಡಿಮೆ ನೀರಿನಲ್ಲಿ ಪಾತ್ರೆ, ಬಟ್ಟೆ ತೊಳೆಯುತ್ತಿದ್ದರು, ಎಲ್ಲ ಕೆಲಸಗಳನ್ನು ನಮಗೂ ಕಲಿಸುತ್ತಿದ್ದರು. ಜೀವನದಲ್ಲಿ ಅಚ್ಚುಕಟ್ಟು ಕಲಿತಿದ್ದು ಅಮ್ಮನಿಂದಲೇ.

ಬಡತನದಲ್ಲಿ ಬೆಳೆಯುತ್ತಿದ್ದ ನಮಗೆ ಕಡಿಮೆ ಖರ್ಚಿನಲ್ಲಿ ಜೀವನ ಮಾಡುವುದನ್ನು ಕಲಿಸಿದರು. ಕಷ್ಟಪಟ್ಟು ಎಂಜಿನಿಯರಿಂಗ್ ಮುಗಿಸಿ ಉನ್ನತ ಅಧಿಕಾರದಿಂದ ನಿವೃತ್ತಿ ಹೊಂದಿದ್ದರೂ ಅಮ್ಮನ ಮಾರ್ಗದರ್ಶನದಲ್ಲಿ ಬೆಳೆದ ನಾನು ಈಗಲೂ ಸರಳ ಜೀವನ ನಡೆಸುತ್ತಾ ಅಮ್ಮನಿಂದ ಪಡೆದ ಸಂಗೀತ ಜ್ಞಾನವನ್ನು ಹಂಚುತ್ತಿದ್ದೇನೆ. ನನ್ನ ಜೀವನ ಶಕ್ತಿ ನನ್ನ ಅಮ್ಮನೇ.

— ಸುಚೇತನ ಬಿ.ಎಸ್.